# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1539 |
| 02. ಸದಸ್ಯರ ಹೆಸರು | : | ಶ್ರೀ ಲಹರ್ ಸಿಂಗ್ ಸಿರೋಯಾ |
| 03. ಉತ್ತರಿಸುವ ದಿನಾಂಕ | : | 18.03.2021 |
| 04. ಉತ್ತರಿಸುವ ಸಚಿವರು | : | ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು |

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಯೋಮಾನಕ್ಕೆ ತಕ್ಕಂತೆ ತೂಕ ಇಳಿಸಿಕೊಳ್ಳುವ ಸಂಬಂಧ ರಾಜ್ಯ ಪೊಲೀಸರಿಗೆ ಆದೇಶ ನೀಡಲಾಗಿದೆಯೇ;</td><td>ಎಡಿಜಿಪಿ, ಕೆ.ಎಸ್.ಆರ್.ಪಿ ಇವರ ಜ್ಞಾಪನ ಸಂಖ್ಯೆ: ಡಿಪ್ಲಾಯ್/259/2020-21, ದಿನಾಂಕ:10.02.2021 ರಲ್ಲಿ ಕೆ.ಎಸ್.ಆರ್.ಪಿ/ಐ.ಆರ್.ಬಿ ಘಟಕದ ಅಧಿಕಾರಿ / ಸಿಬ್ಬಂದಿಗಳು ಸಾಮಾನ್ಯವಾಗಿ ಹೊಂದಿರ ಬೇಕಾದ ತೂಕವನ್ನು ಅವರ ಎತ್ತರಕ್ಕೆ ಅನುಗುಣವಾಗಿ ವೈದ್ಯಕೀಯ ಸೂತ್ರದಂತೆ ನಿಗದಿಪಡಿಸಲಾಗಿರುತ್ತದೆ.</td></tr>
<tr><td>ಆ)</td><td>ನೀಡಿದ್ದಲ್ಲಿ, ವಿವಿಧ ವಯೋಮಾನದವರಿಗೆ ನಿಗದಿಪಡಿಸಿದ ತೂಕ, ತೂಕ ಇಳಿಸಿಕೊಳ್ಳಲು ಪೊಲೀಸ್ ಇಲಾಖೆಯಿಂದ ಕೈಗೊಂಡ ಪ್ರೋತ್ಸಾಹಕ ಕ್ರಮಗಳಾವುವು; (ವಿವರಗಳನ್ನು ಒದಗಿಸುವುದು)</td><td>ಕೆ.ಎಸ್.ಆರ್.ಪಿ/ಐ.ಆರ್.ಬಿ ಘಟಕದ ಅಧಿಕಾರಿ / ಸಿಬ್ಬಂದಿಗಳಿಗೆ ಅವರ ಎತ್ತರಕ್ಕನುಗುಣವಾಗಿ ವೈದ್ಯಕೀಯ ಸೂತ್ರದಂತೆ ನಿಗದಿಪಡಿಸಲಾಗಿರುವ ತೂಕಕ್ಕಿಂತ ಹೆಚ್ಚು ತೂಕ ಹೊಂದಿರುವ ಅಧಿಕಾರಿ / ಸಿಬ್ಬಂದಿಗಳಿಗೆ ಅವರ ವಯೋಮಾನಕ್ಕನುಗುಣವಾಗಿ ಕೆಳಕಂಡ ಕೋಷ್ಟಕದಲ್ಲಿ ನೀಡಿರುವಂತೆ ತೂಕವನ್ನು ಇಳಿಸಿಕೊಳ್ಳುವಂತೆ ಸೂಚಿಸಲಾಗಿದೆ.
<table>
<tr><th>ಕ್ರ.ಸಂ.</th><th>ಅಧಿಕಾರಿ / ಸಿಬ್ಬಂದಿಗಳ ವಯೋಮಿತಿ</th><th>ಇಳಿಸಬೇಕಾದ ಅಧಿಕ ತೂಕ</th></tr>
<tr><td>1.</td><td>40 ವರ್ಷದೊಳಗೆ</td><td>10 ಕೆ.ಜಿ.</td></tr>
<tr><td>2.</td><td>40–50 ವರ್ಷಗಳ ವರೆಗೆ</td><td>5 ಕೆ.ಜಿ.</td></tr>
<tr><td>3.</td><td>50–55 ವರ್ಷಗಳ ವರೆಗೆ</td><td>2.5 ಕೆ.ಜಿ.</td></tr>
</table>
ಅಧಿಕಾರಿ/ ಸಿಬ್ಬಂದಿಗಳು ಅಧಿಕ ತೂಕವನ್ನು ಕಡಿಮೆ ಮಾಡಿಕೊಳ್ಳುವ ಸಲುವಾಗಿ ಪ್ರತಿ ದಿನ ಬೆಳಿಗ್ಗೆ 5 ಕಿ.ಮೀ ನಡಿಗೆ ಮತ್ತು ಓಟವನ್ನು ಆಯೋಜಿಸಲಾಗುತ್ತಿದೆ. ಯೋಗ ತರಗತಿಗಳನ್ನು ನಡೆಸಲಾಗುತ್ತಿದೆ ಹಾಗೂ ನುರಿತ ವೈದ್ಯರಿಂದ ಪ್ರತಿ ದಿನ ತೆಗೆದುಕೊಳ್ಳಬೇಕಾದ ಆಹಾರ ಪದ್ಧತಿ ಮತ್ತು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಕೊಡಿಸಲಾಗುತ್ತದೆ.</td></tr>
<tr><td>ಇ)</td><td>ಕಡ್ಡಾಯವಾಗಿ ತೂಕ ಇಳಿಸಿಕೊಂಡು ನಿಯಮ ಪಾಲಿಸಿದವರಿಗೆ ಮಾತ್ರ ಮುಂಬಡ್ತಿ ನೀಡುವ ಕ್ರಮ ಜಾರಿಯಲ್ಲಿದೆಯೇ?</td><td>ಇಲ್ಲ</td></tr>
</table>

ಒಇ/23/ಪಿಪಿಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು
ಹಾಗೂ ಶಾಸನ ರಚನೆ ಸಚಿವರು